**ಕರ್ನಾಟಕ ಸರ್ಕಾರ**

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಇ-ಆಡಳಿತ ಸಕಾಲ-01/2011-12 ದಿನಾಂಕ: 10ನೇ ಜುಲೈ 2012

**ಸುತ್ತೋಲೆ**

ವಿಷಯ: ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ, 2012 (ಸಕಾಲ)ನ್ನು ಜಾರಿಗೊಳಿಸುವ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಾದ ಪ್ರತಿಭಾ ಕಾರಂಜಿ, ಟಿ.ಎಲ್.ಎಮ್ ಮೇಳದಲ್ಲಿ ಸಕಾಲ ವಿಷಯದ ಅರಿವು ಮೂಡಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 9 ಪ್ರಕಾ(ಆಸು)2012, ದಿನಾಂಕ 27.02.2012.

2. ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ, ದಿನಾಂಕ 27.02.2012, 12.03.2012

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆರವರ ಪತ್ರ ದಿನಾಂಕ: 04.07.2012.

**********

ಕರ್ನಾಟಕ ರಾಜ್ಯದಲ್ಲಿ ನಾಗರೀಕ ಸೇವಾ ಖಾತ್ರಿ ಅಧಿನಿಯಮ 2012(ಸಕಾಲ) ಯೋಜನೆಯು ಜಾರಿಗೆ ಬಂದಿದ್ದು, ನಾಗರೀಕರು ಕರ್ನಾಟಕ ಸರ್ಕಾರದ ಅಡಿಯಲ್ಲಿನ 11 ವಿವಿಧ ಇಲಾಖೆಗಳ ಒಟ್ಟು 151 ಸೇವೆಗಳನ್ನು ನಿಗದಿತ ಕಾಲದೊಳಗಾಗಿ ಪಡೆಯಬಹುದಾಗಿದೆ. ಈ ಸೇವೆಗಳ ಲಭ್ಯತೆಯು 2ನೇ ಏಪ್ರಿಲ್ 2012 ರಿಂದ ಜಾರಿಯಲ್ಲಿರುತ್ತದೆ. ಸಾರ್ವಜನಿಕರಿಗೆಂದೇ ಸೃಜಿಸಲಾದ ಕಾಯ್ದೆಯ ಲಾಭ ಪಡೆಯುವ ಹಕ್ಕು ಜನಸಾಮಾನ್ಯರದ್ದಾಗಿದೆ. ಈ ನಿಟ್ಟಿನಲ್ಲಿ ಸದರಿ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಲ್ಲಿ, ಶಾಲಾ ಮಕ್ಕಳಲ್ಲಿ, ಪೋಷಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ ಮತ್ತು ಇಲಾಖಾ ಅಧಿಕಾರಿಗಳ ಜವಾಬ್ದಾರಿಯಾಗಿದೆ.

ದಿನಾಂಕ:04-07-2012ರ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆರವರ ಪತ್ರದ ಸಾರಾಂಶದಂತೆ ಇಲಾಖೆಯ ಎಲ್ಲಾ ಶಾಲೆಗಳಲ್ಲಿ, ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ನಡೆಸಲಾಗುವ ಶೈಕ್ಷಣಿಕ ಕಾರ್ಯಕ್ರಮಗಳಾದ ಪ್ರತಿಭಾ ಕಾರಂಜಿ ಮತ್ತು ಟಿ.ಎಲ್.ಎಮ್ ಮೇಳ ಕಾರ್ಯಕ್ರಮಗಳಡಿಯಲ್ಲಿ ಚರ್ಚಾ ಸ್ಪರ್ಧೆ, ನಾಟಕ, ಆಶುಭಾಷಣ ಸ್ಪರ್ಧೆ, ಬೀದಿನಾಟಕ, ಶಾಲೆಗಳ ಕ್ಲಬ್ ಚಟುವಟಿಕೆಗಳು ಮತ್ತು ಸಹ ಪಠ್ಯ ಚಟುವಟಿಕೆಗಳು ಇತ್ಯಾದಿ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ಸಕಾಲ ಯೋಜನೆಯಲ್ಲಿ ಲಭ್ಯವಿರುವ ವಿವಿಧ ಸೇವೆಗಳು, ಕಾರ್ಯ ವ್ಯಾಪ್ತಿ, ಅದರಿಂದ ಸಾರ್ವಜನಿಕರಿಗಾಗುವ ಉಪಯೋಗ, ಸೇವೆಯನ್ನು ಪಡೆಯುವ ಬಗೆ, ನಿಗದಿ ಪಡಿಸಿದ ಅವಧಿ, ಇತ್ಯಾದಿಗಳನ್ನು ತಿಳಿಸುವ/ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳು/ ಶಿಕ್ಷಕರು/ಪೋಷಕರು/ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬಹುದಾಗಿದೆ. ಈ ಬಗ್ಗೆ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಕ್ರಮಕೈಗೊಳ್ಳಲು ಸೂಚಿಸಿದೆ.

ಎರಡನೇ ಅಂಶವು, ಈ ಅಧಿನಿಯಮದಡಿ ಶಿಕ್ಷಣ ಇಲಾಖೆಯ 06 ಸೇವೆಗಳಲ್ಲಿ "ಹೊಸ ಶೈಕ್ಷಣಿಕ ಸಂಸ್ಥೆಗಳ ನೊಂದಣಿ, ಹೊಸ ಶಾಲೆಗಳಿಗೆ ಮಾನ್ಯತೆ ನೀಡುವುದು, ಶಾಲೆಗಳ ಮಾನ್ಯತೆ ನವೀಕರಣ ಮಾಡುವುದು" ಈ 03 ಸೇವೆಗಳನ್ನು ಪಡೆಯಲು ನಾಗರೀಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. "ಸಕಾಲ" ಸೇವೆಯನ್ನು ವಿತರಿಸಲು ಗೊತ್ತು ಮಾಡಿದ ಕಾಲದೊಳಗೆ ಸೇವೆಯನ್ನು **ಜಿ.ಎಸ್.ಸಿ. ಸಂಖ್ಯೆಯನ್ನು** ನೀಡಲಾದ ಕಛೇರಿಯಲ್ಲಿಯೇ ಸಂಬಂಧಿಸಿದ ನಾಗರೀಕರಿಗೆ ವಿತರಿಸಿರುವ ಬಗ್ಗೆ ಗಣಕಯಂತ್ರದಲ್ಲಿ ದಾಖಲಿಸಿ ಮುಕ್ತಾಯಗೊಳಿಸಬೇಕಾಗಿರುತ್ತದೆ. ಅಂದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ನಾಗರೀಕರಿಂದ

ಅರ್ಜಿಯನ್ನು ಸ್ವೀಕರಿಸಿ ಅರ್ಜಿದಾರರಿಗೆ **ಜಿ.ಎಸ್.ಸಿ. ಸಂಖ್ಯೆಯನ್ನು** ನೀಡಲಾದ ನಂತರ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಉಪನಿರ್ದೇಶಕರು/ ಆಯುಕ್ತಾಲಯಕ್ಕೆ ಕಳುಹಿಸಿದ ನಂತರವೂ ಸದರಿ ಕಛೇರಿಗಳ ಸಂಪರ್ಕದಲ್ಲಿದ್ದು, ಸೇವೆಯನ್ನು ವಿಲೆ ಮಾಡುವುದಕ್ಕೆ ಗೊತ್ತುಪಡಿಸಿದ ಕಾಲಮಿತಿಯ ಒಳಗೆ ನಾಗರೀಕರಿಗೆ ಸೇವೆಯನ್ನು ಒದಗಿಸಿರುವುದನ್ನು ಖಚಿತ ಪಡಿಸಿಕೊಂಡು, ಅರ್ಜಿದಾರರಿಗೆ ನೀಡಲಾದ **ಜಿ.ಎಸ್.ಸಿ. ಸಂಖ್ಯೆಯನ್ನು** ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿಯೇ ಗಣಕಯಂತ್ರದಲ್ಲಿ ದಾಖಲಿಸಿ ಮುಕ್ತಾಯಗೊಳಿಸಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಸದರಿ ಸೇವೆ ಬಾಕಿ ಇದೆ ಎಂಬುದಾಗಿ ಪೆಂಡೆನ್ಸಿ ಲೀಸ್ಟ್‌ನಲ್ಲಿ ದಾಖಲಾಗುವುದರ ಜೊತೆಗೆ ಇದರಿಂದಾಗಿ ಅನಾವಶ್ಯಕವಾಗಿ ದಿನಒಂದಕ್ಕೆ ರೂ. ೨೦/-ರಂತೆ ದಂಡವನ್ನು ಪಾವತಿಸಬೇಕಾಗುತ್ತದೆ. ಅದುದ್ದರಿಂದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿಶೇಷವಾಗಿ ''ಸಕಾಲ'' ಅರ್ಜಿಗಳ ಬಗ್ಗೆ ನಿಗಾವಹಿಸಿ ಇತ್ಯರ್ಥ ಪಡಿಸಲು ಅಗತ್ಯ ಕ್ರಮವಹಿಸುವುದು.

ಈಗಾಗಲೇ ಇಲಾಖೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ನಿಗಧಿತ ಸಮಯದಲ್ಲಿ ಅರ್ಜಿಗಳು/ಸೇವಗಳು ವಿತರಣೆಯಾಗುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು, ಹಾಗೂ ಪ್ರತಿದಿನ ಆನ್‌ಲೈನ್‌ನಲ್ಲಿ ಬಾಕಿ ಉಳಿದಿರುವ ಸೇವೆ/ಅರ್ಜಿಗಳನ್ನು ಪರಿಶೀಲಿಸಿ, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಿಲೇ ಮಾಡುವ ಬಗ್ಗೆ ಖುದ್ದಾಗಿ ಸೂಚನೆ ನೀಡುವುದರ ಮೂಲಕ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.

(ವಿ.ಜಿ. ದಿವಾಕರ್)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ/ ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು ಗುಲ್ಬರ್ಗಾ/ ಧಾರವಾಡ ವಿಭಾಗ, ಇವರಿಗೆ ಕಳುಹಿಸುತ್ತಾ, ಅಗತ್ಯ ಕ್ರಮವಹಿಸುವುದು.
4. ನಿರ್ದೇಶಕರು, ಪ್ರಾಥಮಿಕ/ ಪ್ರೌಢ ಶಿಕ್ಷಣ/ ಅಲ್ಪ ಸಂಖ್ಯಾತ ಶಿಕ್ಷಣ/ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ/
   ಡಿ.ಎಸ್.ಇ.ಆರ್.ಟಿ., ಬೆಂಗಳೂರು.
5. ರಾಜ್ಯದ ಎಲ್ಲಾ ಉಪ ನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು. ಮೈಸೂರು, ಗುಲ್ಬರ್ಗಾ, ದಾರವಾಡ ಇವರಿಗೆ ಅಗತ್ಯ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು. ಸಾ.ಶಿ.ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
7. ಶ್ರೀ ಎಸ್.ಆರ್. ಸವರಿನಾಥನ್, ನೋಡಲ್ ಅಧಿಕಾರಿ, ಸಕಾಲ, ಹಾಗೂ ಹಿರಿಯ ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ, ಬೆಂಗಳೂರು.
8. ಕಛೇರಿ ಪ್ರತಿ.